**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.960/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಭೀಮಣ್ಣ ಗೋಡಿಹಾಳ | ಪಿಡಬ್ಲ್ಯೂ | 7 |
| ತಂದೆಃಗಂಡನ ಹೆಸರು | : | ಹನುವಂತಪ್ಪ | ಸಿಡಬ್ಲ್ಯೂ | 12 |
| ವಯಸ್ಸು | : | 36 ವರ್ಷ | | |
| ಉದ್ಯೋಗ | : | ಪೋಲಿಸ್ ಪೇದೆ, ಹಾನಗಲ್ ಪೋಲಿಸ್ ಠಾಣೆ | | |
| ವಾಸ ಸ್ಥಳ | : | ಹಾನಗಲ್ | | |

**ದಿನಾಂಕ: 19.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು 2016 ರಿಂದ 2024 ರವರೆಗೆ ಆಡೂರ ಪೊಲೀಸ್ ಠಾಣೆಯಲ್ಲಿ ಪೋಲಸ್ ಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 28.05.2018 ರಂದು ಚಾಸಾ-17 ರವರು ಹೇಳಿದಂತೆ ಅಪಘಾತವಾದ ಸ್ಥಳದ ಪೊಟೋವನ್ನು ತೆಗೆದಿರುತ್ತೇನೆ. ಆ ಪೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು 5 ರಿದ 9 ಎಂದು ಗುರುತಿಸಲಾಗಿದೆ. ಈ ಬಗ್ಗೆ ಚಾಸಾ-17 ರವರು ನನ್ನ ಹೇಳಿಕೆ ಪಡೆದರು.

**:ಪಾಟೀ ಸವಾಲು: ಆರೋಪಿ ಪರ ಶ್ರೀ.ಎ ಸಿ ಸಿ ಪರ ಶ್ರೀ. ಆರ್ ಎಸ್ ಟಿ ವಕೀಲರಿಂದ:**

ಆ ಪೋಟೋಗಳ ಜೊತೆ ಸಿ ಡಿ ಯನ್ನು ಹ ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ಆ ದಿನ ಯಾವುದೇ ಸಿ ಡಿ ಮಾಡದೇ ಇದ್ದರೂ ಸಹ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪೊಟೋಗಳಿಗೆ

ಸಂಬಂಧಪಟ್ಟಂತೆ ನೆಗೆಟಿವ್ ಗಳನ್ನು ಹಾಜರು ಪಡಿಸಿರುವುದಿಲ್ಲ. ಆ ದಿನ ಯಾವುದೇ ಅಪಘಾತವಾಗದೇ ಇದ್ದರೂ ಸಹ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ರೀತಿಯ ಪೋಟೋಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ